

ಈರಣ್ಣ ಗೋದಳ್ಳಿ
ಕಲೆ: ಸಂತೋಷ್ ಸಸಿಹಿತ್ಲು

# ಕೆಂಪು ರವಿ

ಕೆಂಪು ರವಿಯ ನಗುವ ನೋಡಿ
ಕಣ್ಣು ಮನವು ತಣಿವುದು
ಕವಳೆ ಹಣ್ಣ ಕಣ್ಣ ಬಣ್ಣ
ಮಿಂಚಿನಂತೆ ಹೊಳೆವುದು

ಹಾಲು ಕೆನೆಯ ತುಂಬು ಗಲ್ಲ
ಮುತ್ತನಿಡಲು ಕರೆವುದು
ಬೆಣ್ಣೆ ತೊಗಲ ಬಾಹು ಭುಜವು
ಅಪ್ಪಿಕೊಳ್ಳ ಎನುವುದು

ಕುಡಿಯ ನೋಟ ಅಧರ ಮಾಟ
ಹುಚ್ಚು ಹಿಡಿಸಿದಂತಿದೆ
ಕಂಡ ಒಡನೆ ಬಿಡದ ಹಾಗೆ
ಒಸಗೆ ಒಲಿದು ಬಂದಿದೆ

ಮುಗ್ದ ಮನಸು ಮೊಗ್ಗು ಮೊಗವು
ಬೆಳಕು ಸೂಸಿ ಅರಳಿದೆ
ಎಲೆಯ ಮರೆಯ ಕಾಯಿಯಂತೆ
ಮಧುವ ಕೊಡಲು ಕಾದಿದೆ

ಕೆಂಪು ಅಂಗಿ ನಿಂತ ಭಂಗಿ
ನೋಡಲೆಷ್ಟು ಬಂಧುರ
ಜಗದ ಗೊಡವೆ ಬಿಟ್ಟು ಬರಲು
ಕರೆವ ಕೃಷ್ಣ ಸುಂದರ.

